**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

ಸಿ.ಸಿ. ನಂ. : 897/2016 ದಿನಾಂಕಃ05-12-2022

ಸಿ ಡಬ್ಲ್ಯೂ : 03

ಪಿ ಡಬ್ಲ್ಯೂ : 05

-------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

| | | |
|---|---|---|
| ಹೆಸರು | : | ಬಾಹುಬಲಿ ಎಮ್ ಸವದಿ |
| ವಯಾ | : | 40 ವರ್ಷ |
| ಉದ್ಯೋಗ | : | ಅಬಕಾರಿ ಪೇದೆ ಅಥಣಿ ಉಪವಿಭಾಗ |
| ವಾಸಸ್ಥಳ | : | ಅಥಣಿ. |

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು :**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ವಕೀಲರಿಂದಃ**

ನಾನು ಅಬಕಾರಿ ಪೇದೆಯಾಗಿ ದಿನಾಂಕಃ 07.08.2015 ರಿಂದ 30.05.2020 ರ ವರಗೆ ಅಥಣಿ ವಲಯ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ದಿಃ 14.12.2015 ರಂದು ಸಂಜೆ 04-30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ 5 ರವರು ನನಗೆ ಅಥಣಿ ತಾಲೂಕಿನ ಬಲವಾಡ ಗ್ರಾಮದ ಮಲ್ಲಯ್ಯ ಗುಡಿಯ ಹತ್ತಿರ ರಸ್ತೆಯ ಪಕ್ಕದಲ್ಲಿ ತಿಪ್ಪಿಯಲ್ಲಿ ಮದ್ಯ ಸಂಗ್ರಹಿಸುತ್ತಿದ್ದ ಕೊಂಡ ಬಂದ ಬಗ್ಗೆ ಬಾತ್ಮಿ ತಿಳಿಸಿರುತ್ತಾರೆ ಚಾಸಾ 5 ಮತ್ತು ಪಂಚರನ್ನು ಕರೆದುಕೊಂಡು ನಾನು ಹಾಗೂ ಚಾಸಾ 5 ರವರು ನಮ್ಮ ಇಲಾಖಾ ವಾಹನದ ನಂ. KA 22 G457 ನಲ್ಲಿ ಕುಳಿತು ಬಳವಾಡ ಗ್ರಾಮದ ಮಲ್ಲಯ್ಯ ಗುಡಿಯ ಹತ್ತಿರ ತಿಪ್ಪಿ ಯ ಹತ್ತಿರ ಹೋದಾಗ ಸಮಯ ಸುಮಾರು 6-30 ಗಂಟೆ ಆಗಿದ್ದು. ಸದರಿ ಸ್ಥಳವನ್ನು ಪರೀಶಿಲಿಸುವ ಮುನ್ನ ಶೋದನಾ ಸಮ್ಮುಚಿತ ಆಧಾರವನ್ನು ತಯಾರಿಸಿ ನಂತರ ಸದರಿ ತಿಪ್ಪಿ ಯನ್ನು ಪರಿಶೀಲಿಸಲಾಗಿ ಅದರಲ್ಲಿ ಕಬ್ಬಿಣದ ರವದಿಯ ಕೆಳಗೆ 4 ಮದ್ಯದ ಬಾಕ್ಸಗಳು ಕಂಡು ಬಂದಿರುತ್ತವೆ. ಅವುಗಳನ್ನು ತೆಗೆದು ಪಂಚರ ಸಮಕ್ಷಮ ಪರಿಶೀಲಿಸಲಾಗಿ 3 ಬಾಕ್ಸಗಳಲ್ಲಿ Oti ವಿಸ್ಕಿಯೆಂದು ಬರೆದಿರುವ 180ML ನ 144 ಟ್ರೆಟಾ ಪ್ಯಾಕಗಳು ಇನ್ನೊಂದು ಬಾಕ್ಸನಲ್ಲಿ ಬರೆದಿರುವ ಬೆಂಗಳೂರು ಮಾಲ್ಡ ವಿಸ್ಕಿಯೆಂದು ಬರೆದಿರುವ 180 ML ನ 48 ಟೆಟ್ರಾ ಪ್ಯಾಕಗಳು ಇದ್ದವು. ಚಾಸಾ 5 ರವರು ಪಕ್ಕದಲ್ಲಿ ಮನೆಯವರನ್ನು ವಿಚಾರಿಸಿದಾಗ ಆ ಮನೆಯಲ್ಲಿದ್ದ ಒಬ್ಬ ವ್ಯಕ್ತಿ ಹೊರಗೆ ಬಂದು ಆಗ ಚಾಸಾ 5 ರವರು ಆತನ ಹೆಸರು ಕೇಳಲಾಗಿ ಆತನು ತನ್ನ ಹೆಸರನ್ನು ಮಹದೇವ ಶೇಸಪ್ಪ ಮಾದರ ಸಾ. ಬಳವಾಡ ಎಂದು ತಿಳಿಸಿರುತ್ತಾನೆ. ಚಾಸಾ 5 ರವರು ಆತನಿಗೆ ತಿಪ್ಪಿಯಲ್ಲಿರುವ ಮದ್ಯದ ಬಾಕ್ಸಗಳು ಯಾರಿಗೆ ಸೇರಿದ್ದವು ಎಂದು ಕೇಳಿದಕ್ಕೆ ಆತನ್ನು ತಡವರಿಸುತ್ತಾ ನನ್ನದೇ ಎಂದು ತಿಳಿಸಿರುತ್ತಾನೆ. ಮತ್ತು ಅದನ್ನು ಸ್ವಂತ ಮಾರಾಟಗೊಸ್ಕರ ಇಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ. ಆ ನಂತರ ಚಾಸಾ 5 ರವರು ಪಂಚರ ಸಮಕ್ಷಮ 180 ML ನ ಒಂದು Oti ವಿಸ್ಕಿ ಟ್ರೆಟಾ ಪ್ಯಾಕ, 180ML ನ ಬೆಂಗಳೂರು ಮಾಲ್ಡ ವಿಸ್ಕಿ ಒಂದು ಟ್ರೆಟಾ

ಪ್ಯಾಕಗಳಲ್ಲಿ ರಾಸಾರಾಯನಿಕ ಪರೀಕ್ಷೆಗಾಗಿ ಶ್ಯಾಂಪಲ್ ತೆಗೆದು ಅವುಗಳನ್ನು ಪಂಚರ ಸಮಕ್ಷಮ ಬೀಳಿ ಅರಬಿಯನ್ನು ಸುತ್ತಿ ಮೊಹರಿನೊಂದಿಗೆ ಸೀಲ್ ಮಾಡಿರುತ್ತಾರೆ. ಆ ನಂತರ ಚಾಸಾ 5 ರವರು ಸದರಿ ಸ್ದಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಆರೋಪಿತನ್ನು ಮತ್ತು ಮುದ್ದೆಮಾಲಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಘಟನೆ ಸ್ದಳದ ಪೂರ್ವಕ್ಕೆ ಮಲ್ಲಯ್ಯನ ಗುಡಿ , ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ಖುಲ್ಲಾ ಜಾಗ, ಉತ್ತರಕ್ಕೆ ಖುಲ್ಲಾ ಜಾಗ ಇರುತ್ತದೆ. ನ್ಯಾಯಾಲಯ ಮುಂದೆ ಹಾಜರಿರುವ ಆರೋಪಿತನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಮುದ್ದೆ ಮಾಲು 1 ಎಂದು 2 ನೋಡಿ ಗುರುತಿಸುತ್ತೇನೆ.

<u>**ಪಾಟೀ ಸವಾಲುಃ**</u> ಆರೋಪಿ ಪರ ವಕೀಲರು KHA ರವರಿಂದ.

ನಾನು ಅಥಣಿಯ ಅಬಕಾರಿ ವಲಯದಲ್ಲಿಸುಮಾರು 4 ವರ್ಷಗಳು ಕೆಲಸ ಮಾಡಿರುತ್ತೇನೆ. ನನ್ನ 4 ವರ್ಷಗಳು ಸೇವೆಯಲ್ಲಿ ಚಾಸಾ 2 ಮತ್ತು 3 ರವರು ನಮ್ಮ ಅಬಕಾರಿ ಎಷ್ಟು ಪ್ರಕರಣಗಳನ್ನು ಪಂಚರಾಗಿ ಸಾಕ್ಷಿ ಹೇಳಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸದರಿ ಚಾಸಾ 3 ಮತ್ತು 3 ರವರು ಸುಮಾರು 100-150 ಪ್ರಕರಣದಲ್ಲಿ ಪಂಚರಾಗಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 14.12.2015 ರಂದು ಚಾಸಾ 2 ಮತ್ತು 3 ರವರನ್ನು ಚಾಸಾ 5 ರವರು ಮತ್ತು ನಾನು ಕರೆದುಕೊಂಡು ಬಂದಿರುತ್ತೇವೆ. ಸದರಿಯವರು ನಾವು ಹೋಗುವಾಗ ಬಸವೇಶ್ವರ ಸರ್ಕಲನಲ್ಲಿ ನಿಂತಿದ್ದರು . ನಾವು ಹೋಗುವ ಪೂರ್ವದಲ್ಲಿ ಅವರಿಗೆ ಪೋನಿನ ಮುಖಾಂತರ ಯಾವುದೇ ಮಾಹಿತಿ ನೀಡಿರುವುದಿಲ್ಲ . ಸಾಮಾನ್ಯವಾಗಿ ದೇವಸ್ಥಾನದ ಸುತ್ತಮುತ್ತಲು ವಾತಾವರಣ ಸ್ವಚವಾಗಿ ಇಟ್ಟರುತ್ತಾರೆ ಎಂದರೆ ಸರಿ . ಭಕ್ತರು ಮುಂಜಾನ ಮತ್ತು ಸಾಯಾಂಕಾಲ ಸದರಿ ದೇವಸ್ಥಾಕ್ಕೆ ಹೋಗಿರುವುದನ್ನು ನೋಡಿರುತ್ತೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಲ್ಲಯ್ಯನ ಗುಡಿಯ ಬಾಗಿಲು ಯಾವ ದಿಕ್ಕಿಗೆ ಇದೆ ಎಂದು ಹೇಳಲು ಬರುವುದಲ್ಲ ಸದರಿ ದೇವಸ್ಥಾನ ಸುತ್ತ ಮುತ್ತಲು ಎಷ್ಟು ಮನೆಗಳು ಇವೆ ಎಂದು ಹೇಳಲು ಬರುವುದಿಲ್ಲ ಸದರಿ ತಿಪ್ಪಿ ಯಾವ ಸರ್ವೆ ನಂಬರಲ್ಲಿ ಇರುತ್ತದೆ ಮತ್ತು ಯಾರ ಹೆಸರಿನಲ್ಲಿ ಇದೆ ಎಂದು ನಾನು ಪರಿಶೀಲಸಿರುವುದಿಲ್ಲ. ನಿಪಿ1 ನ್ನು ಚಾಸಾ 5 ರವರು ಮತ್ತು ಪಂಚರು ಹೇಳಿದಂತೆ ನಾನೇ ಬರೆದಿರುತ್ತೆನೆ ನಿಪಿ1 ಕ್ಕೆ ನಾನು ದಸ್ತುರಿನಲ್ಲಿ ಸಹಿ ಮಾಡಿರುವುದಿಲ್ಲ ಸಾಕ್ಷಿಯು ನನ್ನ ಮೇಲಾಧಿಕಾರಿಗಳು ಹೇಳಿದಂತೆ ಬರೆದಿರುತ್ತೇನೆ. ದಿಃ 14.12.2018 ರಂದು ಘಟನೆ ಸ್ಥಳಕ್ಕೆ ಹೋಗಿ ತಿಪ್ಪಿ ಯಲ್ಲಿ ಮದ್ಯದ ಟೆಟ್ರಾ ಪ್ಯಾಕಗಳು ಸಿಕ್ಕಿವೆ ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ಅದೇ ರೀತಿ ತಿಪ್ಪಿ ಯ ಪಕ್ಕದಲ್ಲಿ ಮನೆ ಇದ್ದು ಆತನ ತನ್ನ ಸ್ವಂತ ಮಾರಾಟ ಕ್ಕೆ ಮದ್ಯವನ್ನು ಸಂಗ್ರಹಿಸಿರುತತೇನೆ ಎಂದು ಹೇಳಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲು 1 ಮುತ್ತು 2 ಸಾಮಾನ್ಯವಾಗಿ ಎಲ್ಲಾ ಸಾರಾಯಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಇರಹುದು . ನಮ್ಮ ಇಲಾಖೆಯ ಅಂಕಿ ಅಂಶ ತೋರಿಸಲು ಆರೋಪಿಯು ಯಾವುದೇ ತಪ್ಪು ಮಾಡಿದೆ ಇದ್ದರು ಆತನ ವಿರುದ್ದ ಖೊಟ್ಟಿ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಸುತ್ತ ಮುತ್ತಲ್ಲಿನ ಜನರು ಸೇರಿದ್ದರು . ಆಗ ಸುಮಾರು 7-8 ಜನರು ಸೇರಿದ್ದರು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.